ಸ್ವಾತಂತ್ರ್ಯದ ಅಮೃತಮಹೋತ್ಸವ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in
ದೂರವಾಣಿ ಸಂಖ್ಯೆ : 080-22212343
ಇ-ಮೇಲ್ ವಿಳಾಸ : director.ahr.kptcl@gmail.com

**ಸಂಖ್ಯೆ: ಕವಿಪ್ರನಿನಿ/ಬಿ16/44953/2023-24 (Document Verification)** **ದಿನಾಂಕ:** 25 FEB 2025

## ಅಧಿಸೂಚನೆ

**ವಿಷಯ:** ಕವಿಪ್ರನಿನಿಯಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ದಾಖಲಾತಿಗಳ ಪರಿಶೀಲನೆಗಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಗಳನ್ನು ಪ್ರಕಟಿಸುವ ಹಾಗೂ ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಬಗ್ಗೆ.

**ಉಲ್ಲೇಖ:** 1.ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023-24 (KK) & (NKK) ದಿನಾಂಕ: 14.10.2024.

2.ತಿದ್ದುಪಡಿ ಸಂಖ್ಯೆ: ಕವಿಪ್ರನಿನಿ/ಬಿ16/44953/2023-24 (KK) ದಿನಾಂಕ: 20.12.2024.

********

ಉದ್ಯೋಗ ಪ್ರಕಟಣೆ ಸಂಖ್ಯೆ ಕವಿಪ್ರನಿನಿ/ಬಿ16/44953/2023-24 (KK) & (NKK) ದಿನಾಂಕ 14.10.2024 ಹಾಗೂ ದಿನಾಂಕ 20.12.2024 ರ ತಿದ್ದುಪಡಿಗೆ ಅನುಗುಣವಾಗಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್ ಹುದ್ದೆಗಳಿಗೆ ಸೂಚಿತ ರಿಕ್ತ ಸ್ಥಾನಗಳ 1:5 ರ ಅನುಪಾತದಲ್ಲಿ ಹುದ್ದೆವಾರು ಅರ್ಹ ಅಭ್ಯರ್ಥಿಗಳ ಪಟ್ಟಿಗಳನ್ನು, ಕಟ್-ಆಫ್ ಅಂಕಗಳೊಂದಿಗೆ ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in/ ರಲ್ಲಿ ಪ್ರಕಟಿಸಲಾಗಿದೆ. **ಸದರಿ ಪಟ್ಟಿಗಳು ಆಯ್ಕೆ ಪಟ್ಟಿಯಾಗಿರುವುದಿಲ್ಲ ಹಾಗೂ ಆನ್-ಲೈನ್ ಅರ್ಜಿಯಲ್ಲಿ ಅಭ್ಯರ್ಥಿಗಳು ತಿಳಿಸಿರುವ ಮಾಹಿತಿಯ ಅನುಗುಣವಾಗಿ ಪ್ರಕಟಿಸಲಾಗಿದೆ.**

ಸರ್ಕಾರದ Digilocker ತಂತ್ರಾಂಶವನ್ನು ಬಳಸಿಕೊಂಡು ಆನ್‌ಲೈನ್ ಮೂಲಕ ದಾಖಲಾತಿಗಳ ಪರಿಶೀಲನೆಯನ್ನು ನಡೆಸಲು ಉದ್ದೇಶಿಸಲಾಗಿದೆ. ಈ ಸಂಬಂಧವಾಗಿ 1:5 ರ ಅನುಪಾತದ ಪಟ್ಟಿಯಲ್ಲಿ ಸೇರಿರುವ ಅಭ್ಯರ್ಥಿಗಳು, ಈ ಕೆಳಗೆ ತಿಳಿಸಿರುವಂತೆ ಸೂಕ್ತ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಂಡು, ದಾಖಲಾತಿಗಳನ್ನು ನಿಗಮದ website ನಲ್ಲಿ ಸೂಕ್ತ ರೀತಿಯಲ್ಲಿ upload ಮಾಡುವಂತೆ ತಿಳಿಸಲಾಗಿದೆ.

1. ದಾಖಲಾತಿ ಪರಿಶೀಲನೆ ಪಟ್ಟಿಯಲ್ಲಿ ಸೇರಿರುವಂತಹ ಎಲ್ಲಾ ಅಭ್ಯರ್ಥಿಗಳು ಮೊದಲಿಗೆ Digilocker ತಂತ್ರಾಂಶದಲ್ಲಿ Register ಮಾಡಿಕೊಂಡು, ತಮ್ಮ ಆಧಾರ ಸಂಖ್ಯೆಯೊಂದಿಗೆ Login ಆಗಿ, 10ನೇ ತರಗತಿ, ಜಾತಿ ಪ್ರಮಾಣ ಪತ್ರ, ಹೆಚ್.ಕೆ. ಪ್ರಮಾಣ ಪತ್ರ, UDID Card ಪ್ರಮಾಣ ಪತ್ರಗಳನ್ನು Issued documents ನಲ್ಲಿ ಪಡೆಯತಕ್ಕದ್ದು (Digilocker ತಂತ್ರಾಂಶದಲ್ಲಿ Register ಮಾಡಿಕೊಂಡು ದಾಖಲಾತಿಗಳನ್ನು Issued documents ನಲ್ಲಿ ಪಡೆಯುವ ವಿಧಾನವನ್ನು ವೆಬ್‌ಸೈಟ್ ನಲ್ಲಿ ತಿಳಿಸಲಾಗಿದೆ).

2. 1:5 ರ ಅನುಪಾತದ ಪಟ್ಟಿಯಲ್ಲಿ ಸೇರಿರುವ ಅಭ್ಯರ್ಥಿಗಳು, ಆನ್-ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಾರಣಾಂತರಗಳಿಂದ ಭಾವಚಿತ್ರ/ಸಹಿ ತಪ್ಪಾಗಿ ನಮೂದಾದಲ್ಲಿ, document upload module ನಲ್ಲಿ login ಮಾಡಿದ ಕೂಡಲೇ "ನೀವು ಆನ್ ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ತಮ್ಮ ಭಾವಚಿತ್ರ ಮತ್ತು ಸಹಿ ಅಪ್‌ಲೋಡ್ ಮಾಡುವಲ್ಲಿ ಯಾವುದೇ ವ್ಯತ್ಯಾಸ ಉಂಟಾಗಿದೆಯೇ?" ಎಂಬುವುದಕ್ಕೆ "ಹೌದು" ಎಂಬ ಗುಂಡಿಯನ್ನು ಒತ್ತಿ, ತಮ್ಮ ಸರಿಯಾದ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡತಕ್ಕದ್ದು.

3. 1:5 ರ ಅನುಪಾತದ ಪಟ್ಟಿಯಲ್ಲಿ ಸೇರಿರುವ ಅಭ್ಯರ್ಥಿಗಳು, ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ e-sign ಪ್ರಕ್ರಿಯೆ ಪೂರ್ಣಗೊಳಿಸದೇ ಇದ್ದಲ್ಲಿ, document upload module ನಲ್ಲಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವ ಮುನ್ನ ತಮ್ಮ ಆಧಾರ್ ಸಂಖ್ಯೆಯೊಂದಿಗೆ e-sign ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು.

4. Digilocker ನ Issued documents ನಲ್ಲಿ ದಾಖಲಾತಿಗಳನ್ನು fetch ಮಾಡಿಕೊಂಡ ನಂತರ, ಕವಿಪ್ರನಿನಿ ವೆಬ್‌ಸೈಟ್ ಭೇಟಿ ನೀಡಿ ಅಭ್ಯರ್ಥಿಗಳು ದಾಖಲಾತಿ ಅಪ್‌ಲೋಡ್ ಮಾಡುವ ಸಲುವಾಗಿ ತಿಳಿಸಿರುವ ಲಿಂಕ್ ಅನ್ನು ಒತ್ತಿ, ವೆಬ್‌ಸೈಟ್‌ನಲ್ಲಿ ತಿಳಿಸಿರುವ ಮಾರ್ಗಸೂಚಿಯನ್ನು ಪಾಲಿಸುವುದರೊಂದಿಗೆ, ಅರ್ಜಿಯಲ್ಲಿ ಕೋರಿರುವ ಮೀಸಲಾತಿಗಳನುಗುಣವಾಗಿ, ದಾಖಲಾತಿಗಳನ್ನು ಸಲ್ಲಿಸುವುದು (Document upload ಮಾಡುವ ವಿಧಾನವನ್ನು ಮತ್ತು ನಮೂನೆಗಳನ್ನು ವೆಬ್‌ಸೈಟ್ ನಲ್ಲಿ ತಿಳಿಸಲಾಗಿದೆ).

5. Digilocker ತಂತ್ರಾಂಶದಲ್ಲಿ ಲಭ್ಯವಿಲ್ಲದೇ ಇರುವಂತಹ ದಾಖಲೆಗಳನ್ನು ಅಭ್ಯರ್ಥಿಗಳು 500 KB ಮೀರದಂತಹ pdf document ಗಳಾಗಿ ಸ್ಕ್ಯಾನ್ ಮಾಡಿಕೊಂಡು ತಂತ್ರಾಂಶದ Document Upload ವಿಭಾಗದಲ್ಲಿ ಸಂಬಂಧಪಟ್ಟ ಮೀಸಲಾತಿ ಮುಂದೆ ಅಪ್‌ಲೋಡ್ ಮಾಡುವುದು.

6. ಅಭ್ಯರ್ಥಿಗಳು ಎಲ್ಲಾ ದಾಖಲಾತಿಗಳನ್ನು ಅಪ್–ಲೋಡ್ ಮಾಡಿದ ನಂತರ, ತಮ್ಮ ಆಧಾರ ಸಂಖ್ಯೆಯೊಂದಿಗೆ e-sign ಮಾಡುವುದು. e-sign ಮಾಡುವ ಮುನ್ನ, ತಾವು ಎಲ್ಲಾ ದಾಖಲಾತಿಗಳನ್ನು ನಿಗಧಿತ ನಮೂನೆಗಳಲ್ಲಿ ಅಪ್–ಲೋಡ್ ಮಾಡಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು ಹಾಗೂ ಅದರ ಒಂದು ಮುದ್ರಿತ ಪ್ರತಿಯನ್ನು/soft-copy ಪಡೆದಿಟ್ಟುಕೊಳ್ಳತಕ್ಕದ್ದು.

ಮುಂದುವರೆದು, ದಾಖಲಾತಿಗಳ ಪರಿಶೀಲನೆಗಾಗಿ, ಎಲ್ಲಾ ಅವಶ್ಯಕ ಮಾಹಿತಿಯನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in/ ರಲ್ಲಿ ಪಡೆಯತಕ್ಕದ್ದು. **ದಾಖಲಾತಿ ಅಪ್‌ಲೋಡ್ ಮಾಡಲು ಅಭ್ಯರ್ಥಿಗಳಿಗೆ ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in/ ರಲ್ಲಿ ದಿನಾಂಕ: 27.02.2025 ರಿಂದ 10.03.2025 ರವರೆಗೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.**

**ದಿನಾಂಕ: 10.03.2025** ರ ನಂತರ ದಾಖಲಾತಿ ಅಪ್‌ಲೋಡ್ ಮಾಡಲು ಅಭ್ಯರ್ಥಿಗಳಿಗೆ ಯಾವುದೇ ರೀತಿಯಲ್ಲಿ ಅವಕಾಶವನ್ನು ನೀಡಲಾಗುವುದಿಲ್ಲ. ನಿಗಧಿತ ಕಾಲಾವಧಿಯೊಳಗೆ ದಾಖಲಾತಿಗಳನ್ನು ಅಪ್‌ಲೋಡ್ ಮಾಡದ ಅಭ್ಯರ್ಥಿಗಳನ್ನು ಗೈರುಹಾಜರೆಂದು ಪರಿಗಣಿಸಿ, ಇವರಿಗೆ ನೇಮಕಾತಿಗೆ ಯಾವುದೇ ಆಸಕ್ತಿಯಿಲ್ಲವೆಂದು ಭಾವಿಸಿ, ನೇಮಕಾತಿ ಪ್ರಕ್ರಿಯೆಯಿಂದ ಅನರ್ಹಗೊಳಿಸಲಾಗುವುದು.

ಪೂರ್ಣಪ್ರಮಾಣದ ದಾಖಲಾತಿಗಳನ್ನು ಸಲ್ಲಿಸುವ ಅಭ್ಯರ್ಥಿಗಳನ್ನು ಮಾತ್ರ ಸಹನಾ ಶಕ್ತಿ ಪರೀಕ್ಷೆಗೆ ಪರಿಗಣಿಸಲಾಗುವುದು. ಸಹನಾ ಶಕ್ತಿ ಪರೀಕ್ಷೆಗೆ ಸಂಬಧಿಸಿದಂತೆ, ಪ್ರತ್ಯೇಕ ಅಧಿಸೂಚನೆ ಮತ್ತು ಮಾರ್ಗಸೂಚಿಗಳನ್ನು ನಂತರದ ದಿನಗಳಲ್ಲಿ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು.

**ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.)**
**ಕವಿಪ್ರನಿನಿ.**

## ದಾಖಲಾತಿ ಅಪ್‌ಲೋಡ್ ಮಾಡಲು ಅಭ್ಯರ್ಥಿಗಳಿಗೆ ಸೂಚನೆಗಳು:

| ಕ್ರ. ಸಂ. | ದಾಖಲಾತಿ | ಸೂಚನೆಗಳು |
|---|---|---|
| 1. | SSLC Marks Sheet<br>ಎಸ್.ಎಸ್.ಎಲ್.ಸಿ./10ನೇ ತರಗತಿ ಅಂಕಪಟ್ಟಿ | ಅಭ್ಯರ್ಥಿಗಳ ಎಸ್.ಎಸ್.ಎಲ್.ಸಿ./10ನೇ ತರಗತಿ ಅಂಕಪಟ್ಟಿ Digilocker ತಂತ್ರಾಂಶದಲ್ಲಿ ಲಭ್ಯವಿದ್ದಲ್ಲಿ (Issued documents), ದಾಖಲಾತಿ ಅಪ್‌ಲೋಡ್ ತಂತ್ರಾಂಶದಲ್ಲಿ ನೇರವಾಗಿ ಅದನ್ನು view ಮಾಡಬಹುದಾಗಿದೆ. ಒಂದು ವೇಳೆ Digilocker ನಲ್ಲಿ ಅಂಕಪಟ್ಟಿ ಲಭ್ಯವಿಲ್ಲದಿದ್ದಲ್ಲಿ ಅಥವಾ ತಂತ್ರಾಂಶದಲ್ಲಿ ಅದನ್ನು ಪಡೆಯಲು ಸಾಧ್ಯವಾಗದಿದ್ದಲ್ಲಿ, ಸ್ಕ್ಯಾನ್ ಮಾಡಿರುವ ಅಂಕಪಟ್ಟಿಯನ್ನು ಅಭ್ಯರ್ಥಿಗಳು upload ಮಾಡತಕ್ಕದ್ದು. **(Digilocker ನಲ್ಲಿ Karnataka School Examination and Assessment Board ಅಥವಾ Central Board of Secondary Education ಅಥವಾ Council for the Indian School Certificate Examination (CISCE) ರಿಂದ ಅಂಕಪಟ್ಟಿ fetch ಮಾಡತಕ್ಕದ್ದು).** |
| 2. | ID Proof<br>ಗುರುತಿನ ಚೀಟಿ | ಈ ಮುಂದೆ ತಿಳಿಸಿರುವ ಯಾವುದಾದರೂ ಒಂದು ಗುರುತಿನ ಚೀಟಿಯನ್ನು ಸ್ಕ್ಯಾನ್ ಮಾಡಿ upload ಮಾಡತಕ್ಕದ್ದು (Driving License, Election Voter Card, PAN, Passport or Aadhar) |
| 3. | Caste Certificate<br>ಜಾತಿ ಪ್ರಮಾಣ ಪತ್ರ | ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ Digilocker ತಂತ್ರಾಂಶದಲ್ಲಿ ಲಭ್ಯವಿದ್ದಲ್ಲಿ (Issued documents), ದಾಖಲಾತಿ ಅಪ್‌ಲೋಡ್ ತಂತ್ರಾಂಶದಲ್ಲಿ ನೇರವಾಗಿ ಅದನ್ನು view ಮಾಡಬಹುದಾಗಿದೆ. ಒಂದು ವೇಳೆ Digilocker ನಲ್ಲಿ ಲಭ್ಯವಿಲ್ಲದಿದ್ದಲ್ಲಿ ಅಥವಾ ತಂತ್ರಾಂಶದಲ್ಲಿ ಅದನ್ನು ಪಡೆಯಲು ಸಾಧ್ಯವಾಗದಿದ್ದಲ್ಲಿ, ಸ್ಕ್ಯಾನ್ ಮಾಡಿರುವ ಜಾತಿ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು upload ಮಾಡತಕ್ಕದ್ದು. **(Digilocker ನಲ್ಲಿ Revenue Department - Nadakacheri ರಿಂದ ಜಾತಿ ಪ್ರಮಾಣ ಪತ್ರ fetch ಮಾಡತಕ್ಕದ್ದು).** |
| 4. | Rural Certificate<br>ಗ್ರಾಮೀಣ ಪ್ರಮಾಣ ಪತ್ರ | ಅಭ್ಯರ್ಥಿಗಳು ಒಂದರಿಂದ ಹತ್ತನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವುದಕ್ಕಾಗಿ ಪ್ರಮಾಣ ಪತ್ರಗಳನ್ನು ಇಲ್ಲಿ upload ಮಾಡತಕ್ಕದ್ದು. ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು (ಪ.ಜಾ, ಪ.ಪಂ., ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿ ಹೊರತುಪಡಿಸಿ) ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ದಿನಾಂಕ 10.08.2005 ರ ಸರ್ಕಾರಿ ಆದೇಶದ ನಮೂನೆ-1 ರಲ್ಲಿನ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ upload ಮಾಡತಕ್ಕದ್ದು. ಒಂದಕ್ಕಿಂತ ಹೆಚ್ಚಿನ ಪ್ರಮಾಣ ಪತ್ರಗಳು ಇದ್ದಲ್ಲಿ, ಅವನ್ನು ಒಂದೇ pdf ಫೈಲ್‌ನಲ್ಲಿ ಒಂದರ ಕೆಳಗೆ ಒಂದು ಬರುವಂತೆ ಸ್ಕ್ಯಾನ್ ಮಾಡಿ upload ಮಾಡತಕ್ಕದ್ದು. |
| 5. | Kannada Medium Study (KMS) Certificate<br>ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ. | ಅಭ್ಯರ್ಥಿಗಳು ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವುದಕ್ಕಾಗಿ ಪ್ರಮಾಣ ಪತ್ರಗಳನ್ನು ಇಲ್ಲಿ upload ಮಾಡತಕ್ಕದ್ದು. ಒಂದಕ್ಕಿಂತ ಹೆಚ್ಚಿನ ಪ್ರಮಾಣ ಪತ್ರಗಳು ಇದ್ದಲ್ಲಿ, ಅವನ್ನು ಒಂದೇ pdf ಫೈಲ್ ನಲ್ಲಿ ಒಂದರ ಕೆಳಗೆ ಒಂದು ಬರುವಂತೆ ಸ್ಕ್ಯಾನ್ ಮಾಡಿ upload ಮಾಡತಕ್ಕದ್ದು. |
| 6. | Project Displacement (PD) Certificate<br>ಯೋಜನೆ ಪ್ರಮಾಣ ಪತ್ರ. | ಸಕ್ಷಮ ಪ್ರಾಧಿಕಾರಿಗಳು ನೀಡಿರುವ ಪ್ರಮಾಣ ಪತ್ರವನ್ನು ಇಲ್ಲಿ upload ಮಾಡತಕ್ಕದ್ದು. |
| 7. | Physically Disabled (PH) Certificate<br>ಅಂಗವೈಕಲ್ಯ ಪ್ರಮಾಣ ಪತ್ರ. | ಅಭ್ಯರ್ಥಿಗಳ Disability ಪ್ರಮಾಣ ಪತ್ರ ಮತ್ತು UDID Digilocker ತಂತ್ರಾಂಶದಲ್ಲಿ ಲಭ್ಯವಿದ್ದಲ್ಲಿ (Issued documents), ದಾಖಲಾತಿ ಅಪ್‌ಲೋಡ್ ತಂತ್ರಾಂಶದಲ್ಲಿ ನೇರವಾಗಿ ಅದನ್ನು view ಮಾಡಬಹುದಾಗಿದೆ. ಒಂದು ವೇಳೆ Digilocker ನಲ್ಲಿ ಲಭ್ಯವಿಲ್ಲದಿದ್ದಲ್ಲಿ ಅಥವಾ ತಂತ್ರಾಂಶದಲ್ಲಿ ಅದನ್ನು ಪಡೆಯಲು ಸಾಧ್ಯವಾಗದಿದ್ದಲ್ಲಿ, ಸ್ಕ್ಯಾನ್ ಮಾಡಿರುವ Disability ಪ್ರಮಾಣ ಪತ್ರ, ಆಡಿಯೋಮೆಟ್ರಿ ವರದಿ ಮತ್ತು UDID ಗಳನ್ನು ಅಭ್ಯರ್ಥಿಗಳು, ಒಂದೇ pdf ಫೈಲ್ ನಲ್ಲಿ ಒಂದರ ಕೆಳಗೆ ಒಂದು ಬರುವಂತೆ ಸ್ಕ್ಯಾನ್ ಮಾಡಿ upload ಮಾಡತಕ್ಕದ್ದು. **(Digilocker ನಲ್ಲಿ Department of Empowerment of Persons with Disabilities ರಿಂದ Unique Disability Card and Certificate fetch ಮಾಡತಕ್ಕದ್ದು).** |

| | | |
|---|---|---|
| 8. | Hyderabad-Karnataka or Kalyana-Karnataka (HK/KK) Reservation Certificate<br>ಹೈದರಾಬಾದ್-ಕರ್ನಾಟಕ atha (ಕ.ಕ.) ಮೀಸಲಾತಿ ಪ್ರಮಾಣ ಪತ್ರ | ಅಭ್ಯರ್ಥಿಗಳ ಹೈದರಾಬಾದ್-ಕರ್ನಾಟಕ (ಕ.ಕ.) ಮೀಸಲಾತಿ ಪ್ರಮಾಣ ಪತ್ರ Digilocker ತಂತ್ರಾಂಶದಲ್ಲಿ ಲಭ್ಯವಿದ್ದಲ್ಲಿ (Issued documents), ದಾಖಲಾತಿ ಅಪ್‌ಲೋಡ್ ತಂತ್ರಾಂಶದಲ್ಲಿ ನೇರವಾಗಿ ಅದನ್ನು view ಮಾಡಬಹುದಾಗಿದೆ. ಒಂದು ವೇಳೆ Digilocker ನಲ್ಲಿ ಲಭ್ಯವಿಲ್ಲದಿದ್ದಲ್ಲಿ ಅಥವಾ ತಂತ್ರಾಂಶದಲ್ಲಿ ಅದನ್ನು ಪಡೆಯಲು ಸಾಧ್ಯವಾಗದಿದ್ದಲ್ಲಿ, ಸ್ಕ್ಯಾನ್ ಮಾಡಿರುವ ಹೈದರಾಬಾದ್-ಕರ್ನಾಟಕ (ಕ.ಕ.) ಮೀಸಲಾತಿ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು upload ಮಾಡತಕ್ಕದ್ದು. **(Digilocker ನಲ್ಲಿ Revenue Department - Nadakacheri ರಿಂದ HK Region Residence and Eligibility Certificate fetch ಮಾಡತಕ್ಕದ್ದು).** |
| 9. | Ex-Serviceman Certificate<br>ಮಾಜಿ ಸೈನಿಕ ಪ್ರಮಾಣ ಪತ್ರ | ಸಕ್ಷಮ ಪ್ರಾಧಿಕಾರಿಗಳು ನೀಡಿರುವ ಪ್ರಮಾಣ ಪತ್ರವನ್ನು ಇಲ್ಲಿ upload ಮಾಡತಕ್ಕದ್ದು. |
| 10. | Transgender (TG) Certificate<br>ತೃತೀಯ ಲಿಂಗ ಅಭ್ಯರ್ಥಿ ಪ್ರಮಾಣ ಪತ್ರ | ಸಕ್ಷಮ ಪ್ರಾಧಿಕಾರಿಗಳು ನೀಡಿರುವ ಪ್ರಮಾಣ ಪತ್ರವನ್ನು ಇಲ್ಲಿ upload ಮಾಡತಕ್ಕದ್ದು. |
| 11. | Widow Certificate<br>ವಿಧವಾ ಅಭ್ಯರ್ಥಿ ಪ್ರಮಾಣ ಪತ್ರ | ಸಕ್ಷಮ ಪ್ರಾಧಿಕಾರಿಗಳು ನೀಡಿರುವ ಪ್ರಮಾಣ ಪತ್ರವನ್ನು ಇಲ್ಲಿ upload ಮಾಡತಕ್ಕದ್ದು. |
| 12. | Age relaxation to Grama Vidyut Prathinidhis (GVPs)<br>ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ಕೋರಿರುವ ಗ್ರಾಮ ವಿದ್ಯುತ್ ಪ್ರತಿನಿಧಿಗಳು | ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ಕೋರಿರುವ ಗ್ರಾಮ ವಿದ್ಯುತ್ ಪ್ರತಿನಿಧಿಗಳು ತಾವು ಸೇವೆ ಸಲ್ಲಿಸುತ್ತಿರುವ/ಸೇವೆ ಸಲ್ಲಿಸಿದ ಎಸ್ಕಾಂ ಮತ್ತು ವಿಭಾಗದ ವಿವರಗಳನ್ನು ನೀಡತಕ್ಕದ್ದು. |

**ಸೂಚನೆಗಳು:**

1. ದಾಖಲಾತಿಗಳನ್ನು upload ಮಾಡುವ ಮುನ್ನ ದಿನಾಂಕ 14.10.2024 ರ ಉದ್ಯೋಗ ಪ್ರಕಟಣೆಯಲ್ಲಿನ ವಿವರಗಳನ್ನು ಮತ್ತೊಮ್ಮೆ ಓದಿಕೊಳ್ಳತಕ್ಕದ್ದು.
2. ಅಭ್ಯರ್ಥಿಗಳು ಅರ್ಜಿಯಲ್ಲಿ ಕೋರಿರುವ ಮೀಸಲಾತಿಗಳನುಗುಣವಾಗಿ ದಾಖಲಾತಿಗಳನ್ನು ಆನ್‌ಲೈನ್ ಮೂಲಕ upload ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ. ಮೀಸಲಾತಿಗಳಿಗೆ ಸಂಬಂಧಿಸಿದಂತೆ, ಉದ್ಯೋಗ ಪ್ರಕಟಣೆಯ ಕ್ರಮ ಸಂಖ್ಯೆ 11 ರಲ್ಲಿ ತಿಳಿಸಿರುವಂತೆ ಸಕ್ಷಮ ಪ್ರಾಧಿಕಾರಗಳಿಂದ ನಿಗಧಿತ ನಮೂನೆಯಲ್ಲಿ ಪಡೆದಿರತಕ್ಕದ್ದು.
3. ಅಭ್ಯರ್ಥಿಗಳು ದಾಖಲಾತಿಗಳನ್ನು ಸ್ಕ್ಯಾನ್ ಮಾಡುವ ಸಂದರ್ಭದಲ್ಲಿ, ಸ್ಕ್ಯಾನರ್ ಮತ್ತು ಕಾಪಿಯರ್ ಯಂತ್ರಗಳಿಂದ ಮಾಡತಕ್ಕದ್ದು ಹಾಗೂ ಮೊಬೈಲ್ ಫೋನ್‌ಗಳಲ್ಲಿ ಸ್ಕ್ಯಾನ್ ಮಾಡುವುದು ಸೂಕ್ತವಲ್ಲ.
4. ಸ್ಕ್ಯಾನ್ ಮಾಡಿರುವ ದಾಖಲೆಗಳು ಸ್ಪಷ್ಟವಾಗಿರತಕ್ಕದ್ದು ಹಾಗೂ ಅವುಗಳಲ್ಲಿ ನಮೂದಿಸಿರುವ ಅಕ್ಷರಗಳು ಮತ್ತು ಅಂಕಿ ಅಂಶಗಳು ಸ್ಪಷ್ಟವಾಗಿ ಕಾಣುವ ರೀತಿಯಲ್ಲಿರತಕ್ಕದ್ದು. ಫೈಲ್‌ಗಳು pdf format ನಲ್ಲಿ 500 KB ಅಳತೆಯ ಒಳಗೆ ಇರತಕ್ಕದ್ದು.
5. ಒಂದು ವೇಳೆ ಅಭ್ಯರ್ಥಿಯು ಯಾವುದಾದರೂ ಮೀಸಲಾತಿಯನ್ನು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಣ್ತಪ್ಪಿನಿಂದ ಅಥವಾ ಇನ್ನಾವುದೇ ಕಾರಣದಿಂದ ತಪ್ಪಾಗಿ ಕೋರಿದ್ದಲ್ಲಿ ಮತ್ತು ಅಂತಹ ಮೀಸಲಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಲು ಸಾಧ್ಯವಾಗದಿದ್ದಲ್ಲಿ, ತಾನು ಅಂತಹ ಮೀಸಲಾತಿಯನ್ನು ಪಡೆಯಲು ಬಯಸುವುದಿಲ್ಲವೆಂದು, **ಅನುಬಂಧದಲ್ಲಿ** ತೋರಿಸಿರುವ ನಮೂನೆಯಲ್ಲಿ ಸ್ವಯಂ ದೃಢೀಕರಣವನ್ನು upload ಮಾಡತಕ್ಕದ್ದು.
6. ಒಬ್ಬ ಅಭ್ಯರ್ಥಿಯ ಹೆಸರು ಒಂದಕ್ಕಿಂತ ಹೆಚ್ಚಿನ ಹುದ್ದೆಗಳ 1:5 ಅನುಪಾತ ಪಟ್ಟಿಯಲ್ಲಿ ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಯು ಪ್ರತಿಯೊಂದು ಅರ್ಜಿ ಸಂಖ್ಯೆಯೊಂದಿಗೆ login ಆಗಿ ಪ್ರತ್ಯೇಕವಾಗಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡತಕ್ಕದ್ದು.
7. ಅಭ್ಯರ್ಥಿಗಳು document upload module ಮೂಲಕ ದಾಖಲಾತಿ ಸಲ್ಲಿಸುವ ಸಂದರ್ಭದಲ್ಲಿ ಇಂಟರ್‌ನೆಟ್ ಬ್ರೌಸರ್ ನಲ್ಲಿ pop-up blocker ಅನ್ನು "off" ನಲ್ಲಿ ಇರಿಸತಕ್ಕದ್ದು.
8. ದಾಖಲಾತಿಗಳನ್ನು ಅಪ್ ಲೋಡ್ ಮಾಡಿ e-sign ಪೂರ್ಣಗೊಳಿಸಿದ ನಂತರ, ಅಪ್‌ಲೋಡ್ ಮಾಡಿದ ದಾಖಲಾತಿಗಳಿಗೆ ಯಾವುದೇ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

**ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.)**
**ಕವಿಪ್ರನಿನಿ**

<u>ಅನುಬಂಧ</u>

## <u>ಸ್ವಯಂ ದೃಢೀಕರಣ</u>

ಶ್ರೀ./ಶ್ರೀಮತಿ/ಕು.______________________ ಆದ ನಾನು ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ ಕವಿಪ್ರನಿನಿ/ಬಿ16/44953/2023-24 ದಿನಾಂಕ 14.10.2024 ರ ಅನುಗುಣವಾಗಿ __________________ ಹುದ್ದೆಗೆ ___________ ಕಂಪನಿಗೆ ಅರ್ಜಿ ಸಂಖ್ಯೆ_______________ ಅನ್ನು ಸಲ್ಲಿಸಿರುತ್ತೇನೆ.

ನಾನು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ, ಕಣ್ತಪ್ಪಿನಿಂದ ಅಥವಾ ಇನ್ನಾವುದೇ ಕಾರಣದಿಂದ ತಪ್ಪಾಗಿ ____________________________ ಕೋಟಾದಡಿಯಲ್ಲಿ ಮೀಸಲಾತಿಯನ್ನು ಕೋರಿರುತ್ತೇನೆ. ಸದರಿ ಮೀಸಲಾತಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಪ್ರಮಾಣ ಪತ್ರವನ್ನು ನಾನು ಹೊಂದಿರುವುದಿಲ್ಲ ಮತ್ತು ಅದನ್ನು ಪ್ರಸ್ತುತ ಪಡಿಸಲು ಸಾಧ್ಯವಾಗುತ್ತಿಲ್ಲ. ಆದುದರಿಂದ, ಸದರಿ ಮೀಸಲಾತಿಯನ್ನು ಪಡೆಯಲು ಇಚ್ಛಿಸುವುದಿಲ್ಲವೆಂದು ನಾನು ಈ ಮೂಲಕ ತಿಳಿಸುತ್ತಿದ್ದೇನೆ.

ದಿನಾಂಕ:

ಸ್ಥಳ:

**(ಅಭ್ಯರ್ಥಿ ಸಹಿ)**

ಹೆಸರು_______________________

ವಿಳಾಸ_______________________

_____________________________

_____________________________